# ಕರ್ನಾಟಕದ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 528 |
| ಉತ್ತರಿಸಬೇಕಾದ ದಿನಾಂಕ | : 12.12.2024 |
| ಸದಸ್ಯರ ಹೆಸರು | : ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : ಮಾನ್ಯ ಮುಖ್ಯಮಂತ್ರಿಯವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಕ್ರೀಡಾ ಇಲಾಖೆಯಿಂದ ಅನುದಾನವನ್ನು ನೀಡುವ ಕುರಿತು ಅಗತ್ಯ ನಿಯಮಗಳನ್ನು ರಚಿಸಲಾಗಿದೆಯೆ? ರಚಿಸಿಲ್ಲದಿದ್ದರೆ ಯಾವಾಗ ರಚಿಸಲಾಗುವುದು: | ರಚಿಸಲಾಗಿದೆ.<br><br>ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಮಾನ್ಯತೆ ಪಡೆದ ರಾಜ್ಯ ಕ್ರೀಡಾ ಸಂಸ್ಥೆಗಳು ಆಯೋಜಿಸುವ ರಾಜ್ಯ ಮಟ್ಟದ ಕ್ರೀಡಾಕೂಟಗಳಿಗೆ ಮತ್ತು ಸದರಿ ರಾಜ್ಯ ಕ್ರೀಡಾ ಸಂಸ್ಥೆಗಳು ರಾಜ್ಯ ತಂಡವನ್ನು ರಾಷ್ಟ್ರ ಮಟ್ಟದ ಕ್ರೀಡಾಕೂಟಗಳಿಗೆ ನಿಯೋಜಿಸಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅನುದಾನಿತ ಸಂಸ್ಥೆಯಾದ ಕರ್ನಾಟಕ ಕ್ರೀಡಾ ಪ್ರಾಧಿಕಾರದ ಅನುದಾನಿತ ಸಂಹಿತೆ ನಿಯಮಾವಳಿ ಪ್ರಕಾರ ಅನುದಾನ ಒದಗಿಸಲಾಗುತ್ತಿದೆ. |
| ಆ) | ಕರ್ನಾಟಕದಲ್ಲಿ ಕಂಬಳ ಸಮಿತಿ ರಚಿಸುವ ಬಗ್ಗೆ ಈ ಮೊದಲು ಕರ್ನಾಟಕ ವಿಧಾನ ಮಂಡಲದ ಸದನದಲ್ಲಿ ಸರ್ಕಾರವು ಭರವಸೆ ನೀಡಿದ್ದು ಈವರೆಗೆ ಆದ ಪ್ರಗತಿಯ ವಿವರಗಳೇನು: | ಕರ್ನಾಟಕ ರಾಜ್ಯ ಕಂಬಳ ಅಸೋಸಿಯೇಷನ್ (ರಿ) ಇವರು ರಾಜ್ಯ ಕಂಬಳ ಅಸೋಷಿಯೇಷನ್ ಇವರಿಗೆ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಮಾನ್ಯತೆ ನೀಡುವ ಸಂಬಂಧ ಸಲ್ಲಿಸಬೇಕಾಗಿರುವ ಅಗತ್ಯ ದಾಖಲೆಗಳಲ್ಲಿ ಯುವ ವ್ಯವಹಾರ ಮತ್ತು ಕ್ರೀಡಾ ಮಂತ್ರಾಲಯ, ನವದೆಹಲಿ ಇವರು ರಾಷ್ಟ್ರೀಯ ಕ್ರೀಡಾ ಫೆಡರೇಷನ್ ಗೆ ನೀಡಿರುವ ಮಾನ್ಯತೆ ಪತ್ರ ಹಾಗೂ ರಾಷ್ಟ್ರೀಯ ಕ್ರೀಡಾ ಫೆಡರೇಷನ್ ರವರು ರಾಜ್ಯ ಕ್ರೀಡಾ ಸಂಸ್ಥೆಗೆ ಮಾನ್ಯತೆ ನೀಡಿರುವ ಪತ್ರವನ್ನು ಹೊರತುಪಡಿಸಿ ಉಳಿದ ದಾಖಲೆಗಳನ್ನು ಧೃಡೀಕರಿಸಿ ಸಲ್ಲಿಸಿದ್ದು ಸದರಿ ದಾಖಲೆಗಳ ಆಧಾರದ ಮೇಲೆ ಕಂಬಳ ಕ್ರೀಡೆಯ ವಿಶಿಷ್ಟತೆಯನ್ನು ಪರಿಗಣಿಸಿ ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಕಂಬಳ ಕ್ರೀಡೆಯ ರಾಜ್ಯ ಕ್ರೀಡಾ ಸಂಸ್ಥೆಗೆ ಮಾನ್ಯತೆ ನೀಡುವ ಕುರಿತಂತೆ ಮೇಲ್ಕಾಣಿಸಿದ ದಾಖಲೆಗಳನ್ನು ಸಲ್ಲಿಸುವಲ್ಲಿ ವಿನಾಯಿತಿಯನ್ನು ನೀಡಿ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಮಾನ್ಯತೆ ನೀಡುವ ಸಂಬಂಧ ಹಾಗೂ ಕಂಬಳ ಸಂಘಟನೆಗಳು ನಡೆಸುವ ಸಂಸ್ಥೆಗಳಿಗೆ ಅನುದಾನ ಬಿಡುಗಡೆಗೆ ವಿಶೇಷ ಅನುದಾನ ಸಂಹಿತೆ ನಿಯಮಗಳನ್ನು ರಚಿಸಲು ಕ್ರಮಕೈಗೊಳ್ಳಲಾಗುತ್ತಿದೆ. |
| ಇ) | ಕರ್ನಾಟಕ ಕರಾವಳಿ ಭಾಗದಲ್ಲಿ ಸುಮಾರು 100ಕ್ಕಿಂತ ಹೆಚ್ಚು ಸಾಂಪ್ರಾದಾಯಿಕ ಕಂಬಳಗಳು ನಡೆಯುತ್ತಿದ್ದು ಅದಕ್ಕೆ ಅನುದಾನ ನೀಡಲಾಗುತ್ತಿದೆಯೇ? ನೀಡದಿದ್ದಲ್ಲಿ ಕಾರಣಗಳೇನು | • ಕಂಬಳದ ಸಂಘಟನೆಗೆ ಪ್ರಕರಣವಾರು ಪರಿಶೀಲಿಸಿ ಅನುದಾನ ನೀಡಲಾಗುತ್ತಿದೆ.<br><br>1. 2019-20ನೇ ಸಾಲಿನಲ್ಲಿ ಮೂಡುಬಿದ್ರೆಯಲ್ಲಿ ಆಯೋಜಿಸಲಾದ "ಕೋಟಿ-ಚೆನ್ನಯ್ಯ ಜೋಡು ಕೆರೆ "ಕಂಬಳಕ್ಕೆ ರೂ.5.00ಲಕ್ಷಗಳ ಅನುದಾನವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅನುದಾನ ಸಂಸ್ಥೆಯಾದ |

| | | |
|---|---|---|
| | | 'ಕರ್ನಾಟಕ ಕ್ರೀಡಾ ಪ್ರಾಧಿಕಾರ'ದಿಂದ ಒದಗಿಸಲಾಗಿದೆ.<br>2. ದಿನಾಂಕ 11-12-2021 ರಂದು ಮೂಡುಬಿದ್ರೆಯಲ್ಲಿ ಆಯೋಜಿಸಲಾದ ""ಕೋಟಿ-ಚೆನ್ನಯ್ಯ ಜೋಡು ಕರೆ "ಕಂಬಳಕ್ಕೆ ರೂ.5.00ಲಕ್ಷಗಳ ಅನುದಾನವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅನುದಾನ ಸಂಸ್ಥೆಯಾದ 'ಕರ್ನಾಟಕ ಕ್ರೀಡಾ ಪ್ರಾಧಿಕಾರ'ದಿಂದ ಒದಗಿಸಲಾಗಿದೆ.<br>3. ಅಲ್ಲದೆ, ದಿನಾಂಕ:08-01-2023 ಮತ್ತು 09-01-2023 ರಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಉಡುಪಿ ಜಿಲ್ಲೆಯಲ್ಲಿ 'ಗ್ರಾಮೀಣ ಕ್ರೀಡೋತ್ಸವ' ಕ್ರೀಡಾಕೂಟ ಆಯೋಜನೆ ಸಂದರ್ಭದಲ್ಲಿ ಕಂಬಳ ಕ್ರೀಡೆಯನ್ನು ಯಶಸ್ವಿಯಾಗಿ ಆಯೋಜಿಸಲಾಗಿದೆ.<br>4. ದಿನಾಂಕ:25-11-2023 ರಿಂದ 26-11-2023 ರವರೆಗೆ ನಡೆದ ಬೆಂಗಳೂರು ಕಂಬಳಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ರೂ.100.00 ಲಕ್ಷಗಳ ಅನುದಾನವನ್ನು ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ರೂ.50.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿದೆ. |
| ಈ) | ಆಧುನಿಕ ಕಂಬಳಗಳಿಗೆ ಅನುದಾನ ನೀಡಿ ಈ ಕಂಬಳಗಳನ್ನು ಇನ್ನಷ್ಟು ಶಿಸ್ತುಬದ್ಧವಾಗಿ ನಡೆಸಲು ಅಗತ್ಯವಿರುವ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಯಾವ ರೀತಿ ಕ್ರಮವಹಿಸಲಾಗುತ್ತಿದೆ: | ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದ್ರೆಯ 'ವೀರ ರಾಣಿ ಅಬ್ಬಕ್ಕ ಸಂಸ್ಕೃತಿ ಗ್ರಾಮ'ದಲ್ಲಿ 10 ಎಕರೆ ಜಾಗದಲ್ಲಿ 'ಕೋಟಿ-ಚೆನ್ನಯ್ಯ' ಹೆಸರಿನ ಜೋಡುಕರೆಯನ್ನು ನಿರ್ಮಾಣ ಮಾಡಲಾಗಿದ್ದು, ವೀಕ್ಷಕರ ಗ್ಯಾಲರಿ ಮತ್ತಿತರ ಅಗತ್ಯ ಮೂಲಸೌಕರ್ಯಗಳೊಂದಿಗೆ ಕಂಬಳ ಕ್ರೀಡಾಂಗಣವನ್ನು ಮತ್ತು ಅದೇ ರೀತಿ, ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಮಿಯ್ಯಾರಿನಲ್ಲಿ 5 ಎಕರೆ ನಿವೇಶನದಲ್ಲಿ 'ಲವ-ಕುಶ' ಹೆಸರಿನ ಕಂಬಳ ಕ್ರೀಡಾಂಗಣವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ನಿರ್ಮಿಸಲಾಗಿದೆ. ಈ ಕಂಬಳ ಕ್ರೀಡಾಂಗಣಗಳನ್ನು ನಿರ್ಮಿಸಲು ಅನುದಾನವನ್ನು ಒದಗಿಸಿದ್ದು, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮತ್ತು ಅಭಿವೃದ್ಧಿಪಡಿಸಲು ಕ್ರಮವಹಿಸಲಾಗಿದೆ. |
| ಉ) | ಪ್ರತಿ ವರ್ಷ ಕಂಬಳ ಕ್ರೀಡೆಗೆ ನೀಡುವ ಅನುದಾನವನ್ನು ಇಲಾಖಾ ಕ್ರಿಯಾ ಯೋಜನೆಯಲ್ಲಿ ಸೇರಿಸಲು ಕೈಗೊಂಡ ಕ್ರಮಗಳೇನು? ಈ ಕುರಿತಂತೆ ನಿಯಮಗಳನ್ನು ಯಾವಾಗ ರೂಪಿಸಲಾಗುವುದು? | 2025-26ನೇ ಸಾಲಿಗೆ ಕಂಬಳ ಕ್ರೀಡೆಗೆ ಅನುದಾನ ಹಂಚಿಕೆ ಮಾಡಲು ಕ್ರಿಯಾ ಯೋಜನೆಯಲ್ಲಿ ಪ್ರಸ್ತಾಪಿಸಲಾಗಿದ್ದು, ಈ ಕುರಿತು ಸೂಕ್ತ ಕ್ರಮಕೈಗೊಳ್ಳಬೇಕಾಗಿರುತ್ತದೆ.<br><br>ನಿಯಮಗಳನ್ನು ರಚಿಸುವ ಕುರಿತು ಕ್ರಮ ಸಂಖ್ಯೆ 'ಅ" ರಲ್ಲಿ ಉತ್ತರಿಸಲಾಗಿದೆ. |

**ಸಂಖ್ಯೆ: ವೈಎಸ್‌ಡಿ-ಇಬಿಬಿ/103/2024**

(ಸಿದ್ದರಾಮಯ್ಯ)
ಮುಖ್ಯಮಂತ್ರಿ